ಸುರಪುರ ತಾಲ್ಲೂಕಿನ ನಾರಾಯಣಪುರ ಮೀನುಪಾಲನಾ ಕೇಂದ್ರದ ದುರಸ್ತಿ

3212 (3791); ಶ್ರೀ ರಾಜ ವೆಂಕಟಪ್ಪ ನಾಯಕ (ಸುರಪುರ)

ಅ) ಯಾದಗಿರಿ ಜಿಲ್ಲೆ, ಸುರಪುರ ತಾಲ್ಲೂಕಿನ ನಾರಾಯಣಪುರದಲ್ಲಿರುವ ಮೀನು ಪಾಲನಾ ಕೇಂದ್ರದ ದುರಸ್ತಿ ಕಾಮಗಾರಿ 2012–13 ರಲ್ಲಿ ಕೈಗೆತ್ತಿಕೊಂಡಿದ್ದರೂ ಇಲ್ಲಿಯವರೆಗೆ ಕಾಮಗಾರಿ ಪೂರ್ಣಗೊಳ್ಳದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸದರಿ ಕಾಮಗಾರಿಗಳು ವಿಳಂಬವಾಗಲು ಕಾರಣವೇನು; ಇದಕ್ಕೆ ಕಾರಣವಾಗಿರುವ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಮೀನು ಪಾಲನಾ ದುರಸ್ತಿ ಕಾಮಗಾರಿಗೆ ಮೀಸಲಿರಿಸಿದ ಅನುದಾನವೆಷ್ಟು (ವಿವರ ನೀಡುವುದು)?

ಶ್ರೀ ಕೆ. ಅಭಯ ಚಂದ್ರ (ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು)

ಅ) ಬಿಜಾಪುರ ಜಿಲ್ಲೆ ಮುದ್ದೇಬಿಹಾಳ ತಾಲ್ಲೂಕಿನ ನಾರಾಯಣಪುರ ಮೀನುಮರಿ ಪಾಲನಾ ಕೇಂದ್ರದಲ್ಲಿ 2012–13ನೇ ಸಾಲಿನಲ್ಲಿ ಯಾವುದೇ ದುರಸ್ತಿ ಕಾಮಗಾರಿ ಕೈಗೆತ್ತಿಕೊಂಡಿರುವುದಿಲ್ಲ.

ಆ) ವಿಳಂಬದ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) 2013–14ನೇ ಸಾಲಿನಲ್ಲಿ ₹ 290.55 ಲಕ್ಷಗಳನ್ನು ಮೀನು ಪಾಲನಾ ಕೇಂದ್ರದ ದುರಸ್ತಿಗಾಗಿ ಮೀಸಲಿರಿಸಿದೆ. ಮೀನುಮರಿ ಪಾಲನಾ ಕೇಂದ್ರದ ಬ್ಲಾಕ್ "ಎ" ಮತ್ತು ಬ್ಲಾಕ್ "ಬಿ" ಯ ಒಟ್ಟು 30 ಮೀನುಮರಿ ಪಾಲನಾ ಕೊಳಗಳ ದುರಸ್ತಿ, ಕಛೇರಿ ಕಟ್ಟಡ ದುರಸ್ತಿ, ಮೀನುಗಾರಿಕೆ ಕ್ಷೇತ್ರಪಾಲಕರ ವಸತಿ ಗೃಹ ದುರಸ್ತಿ ಹಾಗೂ ಜಾಕ್‌ವೆಲ್ ದುರಸ್ತಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ, ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿದೆ.